ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇದು ಬಹಳ ಮುಖ್ಯವಾದ ಪ್ರಶ್ನೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಟಿ ಎಂ ಮಂಜುನಾಥ್.—ಹರಿಜನ ಗಿರಿಜನರು ಮತ ನೀಡುವುದಿಲ್ಲವಾದುದರಿಂದ ಇದನ್ನು ಸರಿಯಾದ ರೀತಿಯಲ್ಲಿ ತಿದ್ದುಪಡಿಮಾಡಿ ಎಂದು ಮಾನ್ಯ ಸದಸ್ಯರು ಪರೋಕ್ಷವಾಗಿ ಸೂಚಿಸುತ್ತಿದ್ದಾರೆ. ಸರ್ಕಾರ ತಿದ್ದುಪಡಿ ಮಾಡುವುದಾದರೆ ಮಾಡಲಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿರುವ ಪ್ರಶ್ನೆ ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟದ್ದು. ಈ ಜಿಲ್ಲೆಗೆ ಸಂಬಂಧಪಟ್ಟ ಎರ್ಲಾ ವಿವರಗಳನ್ನು ನಾನು ಸದ್ಯಕ್ಕೆ ಕೊಡಬಲ್ಲೆ. ಮಾನ್ಯ ಸದಸ್ಯರು ಎಲ್ಲ ಜಿಲ್ಲೆಗಳ ವಿವರ ಕೇಳುವುದಾದರೆ ಪ್ರತ್ಯೇಕವಾದ ಒಂದು ಪ್ರಶ್ನೆಯನ್ನು ಕಳಿಂಹಿಸಲಿ.

SRI M. M. SAJJAN.—What are the reasons for not making this Family Planning a compulsory one by means of a legislation?

SRI H.M. CHANNABASAPPA.—The reason is firstly it is not desirable Nowhere in the world has any Government or any State or any country undertaken Family planning or Sterlization by compulsion and secondly, it is practically impossible. If all people *i. e.* eligible couples were to rush into the Hospitals because it is compulsory, where am I to bring doctors to operate and take care of them? So, it is practically an impossibility.

Removal of Octroi

199. SRI K. R. SRINIVASULU NAIDU (Shanthinagar).—Will the or Minister Municipal Administration and Politi cal Pensions be pleased to state:—

(*a*) whether there is any proposal before the Government to remove octroi in the City of Corporation;

(*b*) if so, arrangements made to substitute the revenue of the Corporation?

SRI D.K. NAIKER (Minister for Municipal Administration and Political Pensions) ;—

(*a*) No

(*b*) Does not arise in view of reply to clause (a)

ಶ್ರೀ ಕೆ.ಆರ್. ಶ್ರೀನಿವಾಸಲು ನಾಯಿಡು.—ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ಮಾನ್ಯ ಮಂತ್ರಿಗಳು "ಇಲ್ಲ" ಎಂದು ಹೇಳಿದ್ದಾರೆ. ಆಕ್ಟ್ರಾಯ್‌ನ್ನು ರದ್ದು ಮಾಡಬೇಕೆಂದು ಹಿಂದೆ ಸಲಹೆ ಬಂದಿತ್ತೆ? ಬಂದಿದ್ದರೆ ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಮತ್ತು ಆಕ್ಟ್ರಾಯ್ ತೆರಿಗೆಯಿಂದ ನಗರ ಸಭೆಗೆ ಎಷ್ಟು ಕೋಟಿ ರೂಪಾಯಿ ವರಮಾನ ಬರುತ್ತಿದೆ?

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಸದಸ್ಯರಿಗೆ ತಿಳಿದ ಹಾಗೆ ಆಕ್ಟ್ರಾಯ್ ತೆರಿಗೆಯನ್ನು ತೆಗೆಯಬೇಕೆಂದು ಅನೇಕ ಸಲಹೆಗಳು ಬಂದಿದ್ದವು. ಈ ಬಗ್ಗೆ ಸರ್ಕಾರ ಖಾರ್ಗೆ ಸಮಿತಿಯನ್ನು ನೇಮಿಸಿ, ಅವರಿಂದ ಶಿಫಾರಸ್ಸುಗಳನ್ನು ಪಡೆದುಕೊಂಡಿತು. ಖಾರ್ಗೆ ಸಮಿತಿಯವರು ಆಕ್ಟ್ರಾಯ್ ತೆರಿಗೆಯನ್ನು ಮುಂದುವರಿಸಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಆಕ್ಟ್ರಾಯ್

ಗೆಯಿಂದ ನಗರ ಸಭೆಗೆ 1976-77ನೇ ಸಾಲಿಗೆ ಎಂಟು ಕೋಟಿ ಮೂವತ್ತಾರು ಲಕ್ಷ ರೂಪಾಯಿಗಳು ಬಂದಿವೆ. 1977-78ನೇ ಸಾಲಿಗೆ ಒಂಭತ್ತು ಕೋಟಿ ರೂಪಾಯಿ ಬರಬಹುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಕೆ.ಆರ್. ಶ್ರೀನಿವಾಸಲು ನಾಯುಡು.—ಇದರ ಬಗ್ಗೆ ಕೇಂದ್ರ ಸರ್ಕಾರದ ಅಭಿಪ್ರಾಯವೇನು?

ಶ್ರೀ ಡಿ.ಕೆ. ನಾಯ್ಕರ್.—ಕೇಂದ್ರ ಸರ್ಕಾರದವರು ಆಕ್ಟ್ರಾಯ್ ತೆರಿಗೆಯನ್ನು ತೆಗೆಯುಬೇಕೆಂಬ ವಿಚಾರದಲ್ಲಿದ್ದಾರೆ. ಅಲ್ಲಿಗೆ ನಾವು ನಗರ ಸಭೆಯ ಮನೂಡೆಯನ್ನು ಕಳುಹಿಸಿದಾಗ, ಆಲ್ಲಿ ಲೆವಿ ಆಫ್ ಆಕ್ಟ್ರಾಯ್ ಇದೆ ಅದನ್ನು ಮುಂದುವರಿಸಬಾರದು ಎಂದು ಅಭಿಪ್ರಾಯ ತಾಳಿದ್ದರು. ಆದರೆ, ಇದನ್ನು ಜನರಲ್ ಪಾಲಿಸಿ ಎಂದು ತೆಗೆದುಕೊಂಡು, ಇದರ ಬದಲಿಗೆ ಬೇರೆ ಯಾವ ತೆರಿಗೆಯನ್ನು ಸಲಹೆ ಮಾಡುತ್ತೀರಿ ಎನ್ನುವ ಪ್ರಶ್ನೆ ಬಂದಿತು. ಎಲ್ಲ ರಾಜ್ಯಗಳಲ್ಲೂ ಇಂಪ್ಲಿಮೆಂಟ್ ಮಾಡಿದಾಗ ನಾವೂ ಮಾಡುತ್ತೇವೆ ಎಂದು ಹೇಳಿಕೆ ಕೊಟ್ಟ ನಂತರ; ಅವರು ಆ ಮನೂಡೆಯನ್ನು ಮುಂಜೂರು ಮಾಡಿಕೊಟ್ಟಿದ್ದಾರೆ

ಶ್ರೀ ಕೆ.ಆರ್. ಶ್ರೀನಿವಾಸಲು ನಾಯುಡು.—ಆಕ್ಟ್ರಾಯ್‌ನಿಂದ ಸುಮಾರು ಒಂಬತ್ತು ಕೋಟಿ ರೂಪಾಯಿ ಬರುತ್ತದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ಕೆಲವು ಸಂದರ್ಭಗಳಲ್ಲಿ ಇದರಲ್ಲಿ ಬೇಕಾದಷ್ಟು ಸೋರಿ ಹೋಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ?

ಶ್ರೀ ಡಿ.ಕೆ. ನಾಯ್ಕರ್.—ಸೋರಿಕೆಯನ್ನು ತಡೆಗಟ್ಟಲು ಆಡ್ಮಿನಿಸ್ಟ್ರೇಟಿವ್ ಆಗಿ ಕಾರ್ಪೊರೇಷನ್‌ನಿಂದ ಆಕ್ಟ್ರಾಯ್ ಸೂಪರಿಂಟೆಂಡೆಂಟ್ ಅವರನ್ನು ನೇಮಿಸಿದ್ದಾರೆ. ಅವರು ಮೇಲಿಂದ ಮೇಲೆ ಚೆಕ್ ಮಾಡುತ್ತಿದ್ದಾರೆ. ಸಿಬ್ಬಂದಿಯನ್ನೂ ಹೆಚ್ಚು ಮಾಡಿ ಈಗ ಮೂರು ಷಿಫ್ಟ್‌ಗಳಾಗಿ ಕೆಲಸ ಮಾಡಬೇಕೆಂದು ಮಾಡಿದ್ದಾರೆ.

Government Hospital at Hospet

240. SRI B. SATHYANARAYANA SINGH (Hospet).—Will the Minister for Health be pleased to state:—

(*a*) whether it is a fact that a 100 bedded Hospital had been sanctioned for Hospet City;

(*b*) whether it is a fact that the site for construction of the above Hospital was inspected and finalised by the then Minister for Health;

(*c*) whether it is a fact that acquisition proceedings for the said site have not been started yet;

(*d*) whether Government had ordered demolition of the existing Government Hospital Building for construction of 100 bedded Hospital;

(*e*) whether it is a fact that the above order was withdrawn;

(*f*) the stage at which the matter stands now;

(*g*) has the Government made up its mind regarding the site for the proposed 100 bedded Hospital;